ಅ) ಡಾಂಬರೀಕರಣಕ್ಕೆ 1991-92ನೇ ಸಾಲಿನಲ್ಲಿ 1.80 ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಇ) ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ ತೆಗೆದುಕೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸೆಪ್ಲಿಮಂಟರಿ ಅನುದಾನದ ಲಭ್ಯತೆಯನ್ನು ಅನುಸರಿಸಿ ಹೆಚ್ಚುವರಿ ಅನುದಾನ ನೀಡುವ ಉದ್ದೇಶವಿದೆ.

ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಓವರ್ ಬ್ರಿಡ್ಜ್ ನಿರ್ಮಾಣ

1118 (1805) ಶ್ರೀ ಪಿ. ಬಸವರಾಜ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ರಾಜ್ಯ ಹೆದ್ದಾರಿಗಳನ್ನು ಸಂಧಿಸುವಲ್ಲಿ ಮೇಲು ಸೇತುವೆಯನ್ನು ನಿರ್ಮಿಸಲು ರಾಜ್ಯ ಸರ್ಕಾರ ಸಹಭಾಗಿತ್ವ ನೀಡುತ್ತದೆಯೆ;

ಆ) ನೀಡುತ್ತಿದ್ದಲ್ಲಿ, ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಬ್ರಹ್ಮಾವರ-ಹೆಬ್ರಿ ರಾಜ್ಯ ರಸ್ತೆಯ ಬಾಂತಾರು ಸ್ಥಳದಲ್ಲಿ ರೈಲ್ವೆಯವರು ನಿರ್ಮಿಸಲು ಉದ್ದೇಶಿಸಿರುವ 'ಲೆವೆಲ್‌ಕ್ರಾಸಿಂಗ್'ಗೆ ಬದಲಾಗಿ "ಓವರ್ ಬ್ರಿಡ್ಜ್" ನಿರ್ಮಾಣವಾಗುವಂತೆ ಸರ್ಕಾರ ಕ್ರಮ ಕೈಗೊಳ್ಳುವುದೆ;

ಇ) ಇಲ್ಲದಿದ್ದಲ್ಲಿ ರಾಜ್ಯ ಸರ್ಕಾರವು ಈ ಸ್ಥಳದಲ್ಲಿ ಲೆವೆಲ್ ಕ್ರಾಸಿಂಗ್ ಬದಲು ಓವರ್ ಬ್ರಿಡ್ಜ್‌ನ್ನು ನಿರ್ಮಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ರಾಜ್ಯ ಹೆದ್ದಾರಿಗಳನ್ನು ಸಂಧಿಸುವಲ್ಲಿ ಮೇಲು ಸೇತುವೆಯನ್ನು ನಿರ್ಮಿಸಲು ರಾಜ್ಯ ಸರ್ಕಾರವು ನೇರವಾಗಿ ಸಹಭಾಗಿತ್ವವನ್ನು ನೀಡುವುದಿಲ್ಲ. ಇದು ಹೊಸ ರೈಲು ಮಾರ್ಗವಾದ್ದರಿಂದ ಎಲ್ಲಾ ಕಾಮಗಾರಿಯನ್ನು ಕೊಂಕಣ ರೈಲ್ವೆ ಯೋಜನೆಯ ಅಂದಾಜು ಪಟ್ಟಿಯಲ್ಲಿ ಭರಿಸಬೇಕಾಗುತ್ತದೆ.

ಆ) ಬ್ರಹ್ಮಾವರ ಹೆಬ್ರಿ ಮುಖ್ಯ ಜಿಲ್ಲಾ ರಸ್ತೆಯ (ರಾಜ್ಯ ಹೆದ್ದಾರಿಯಲ್ಲಿ) 78.851 ಕಿ.ಮೀ. ರೈಲು ಮಾರ್ಗದ ರಸ್ತೆ ದಾಟಿನಲ್ಲಿ 'ಬಿ' ಕ್ಲಾಸ್ ಲೆವೆಲ್ ಕ್ರಾಸಿಂಗ್ ನಿರ್ಮಿಸಲು ಉದ್ದೇಶಿಸಲಾಗಿದೆ. ಈಗಿನ ವಾಹನ ಸಂಚಾರಗಳ ಪ್ರಮಾಣಕ್ಕೆ ಉದ್ದೇಶಿಸಿರುವ ಲೆವೆಲ್ ಕ್ರಾಸಿಂಗ್ ಸರಿಯಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.